ಸಣ್ಣ ಕಲ್ಪನೆಯೂ ಬಂದಿರಲಿಲ್ಲ. ಕಣ್ಣೆದುರು ಸದಾ ನಗುಮುಖ ತೋರಿಸಿಕೊಂಡಿರುವವಳಿಗೇ ಇಂಥಾದ್ದೊಂದು ತಳಮಳಿಸುವ ಗುಪ್ತ ಚಹರೆಯೊಂದಿರುವಾಗ ಬೆನ್ನುಹಾಕಿ ನಡೆದು ಹೋದವಳೊಳಗೆ ಅದಿನ್ನೆಂತಹಾ ವೇದನೆಗಳಿದ್ದಿರಬಹುದು?

ಯಾಕೋ ಜ್ಯೋತಿ ತೀವ್ರವಾಗಿ ಕಾಡತೊಡಗಿದಳು.

★★★

ಎಂಟರ ಎಳೆ ಬಿಸಿಲಿನಲ್ಲಿ ನಮ್ಮ ಮನೆ ಹೊಳೆಯುತ್ತಾ ನಿಂತಿತ್ತು. ಉಣಗೋಲು ತೆರೆಯುತ್ತಿದ್ದಂತೆಯೇ ಮುದ್ದಿನ ಭರದಲ್ಲಿ ತಲೆ, ಬಾಲ ಕುಣಿಸುತ್ತಾ ನನ್ನ ಮೇಲೆರಗಿದ ಟಾಮಿಯನ್ನು ವೈಷ್ಣವಿ “ಏ ನಾನು ನಿಮ್ಮನೆ ಗೆಸ್ಟ್ ಕಣೋ... ನನ್ನೂ ಮಾತಾಡ್ಸೋ...” ಎನ್ನುತ್ತಾ ತನ್ನಕಡೆಗೆಳೆದುಕೊಂಡಳು. ಟಾಮಿಯನ್ನು ಅವಳ ಅಪ್ಪುಗೆಗೊಪ್ಪಿಸಿ ಅಂಗಳ ದಾಟಿದವನಿಗೆ ಜಗುಲಿಯ ಕುರ್ಚಿಯ ಮೇಲೆ ದಿನಪತ್ರಿಕೆ ಹಿಡಿದು ಕುಳಿತಿರುವವರನ್ನು ನೋಡಿ ಆಶ್ಚರ್ಯವಾಯಿತು. ವೈಷ್ಣವಿಯ ಸೋದರಮಾವ ಭಾಸ್ಕರರಾಯರು. ಗಂಡುದಿಕ್ಕಿಲ್ಲದ ವೈಷ್ಣವಿಯ ಕುಟುಂಬದಲ್ಲಿ ಯಾವೊಂದು ಗುರುತರ ಸಂಗತಿ ಜರುಗಿದರೂ ಅದು ಇವರ ಭಾಗವಹಿಸುವಿಕೆಯಿಲ್ಲದೇ ಮುಗಿದದ್ದೇ ಇಲ್ಲ. ಅವರೇ ಬಂದಿದ್ದಾರೆಂದರೆ ಶಾಸ್ತ್ರಿಗಳ ಪುತ್ರನಿಗೋ, ಕೇಕೋಡರ ಮಗನಿಗೋ ಕಂಕಣಬಲ ಕೂಡಿಬಂದಿದೆ ಎಂದು ಊಹಿಸಿಕೊಂಡು ಒಳಗೇ ನಕ್ಕು ಮುನ್ನಡೆದೆ. ಒಳಗಿನ ಕೋಣೆಗಳಲ್ಲಿ ಅಮ್ಮಂದಿರಿಬ್ಬರೂ ಸಮರೋಪಾದಿಯಲ್ಲಿ ಓಡಾಡಿಕೊಂಡಿದ್ದರು. ನಮ್ಮನ್ನು ಕಂಡವರೇ “ಬನ್ನಿ. ಬೇಗ ಕೈಕಾಲ್ಮುಖ ತೊಳ್ಕೊಂಡು ತಿಂಡಿ ತಿನ್ನಿ” ಎಂದು ಗಡಿಬಿಡಿ ತೋರಿದರು. ಇಷ್ಟು ಗಡಿಬಿಡಿಯಲ್ಲಿ ತಿಂಡಿತಿಂದು ಹಿಡಿಯಬೇಕಿರುವುದು ಯಾವ ಫ್ಲೈಟನ್ನೆನ್ನುವುದು ಅರ್ಥವಾಗದೆ ನಾನೂ, ವೈಷ್ಣವಿಯೂ ಒಬ್ಬರ ಮುಖ ಒಬ್ಬರು ನೋಡಿಕೊಂಡೆವಾದರೂ ನನ್ನ ಮನದಲ್ಲಾಗಲೇ ಊದು ಬತ್ತಿಯಾಗಿ ಹೊಗೆಯಾಡುತ್ತಿದ್ದ ಸಂದೇಹವೀಗ ಒಲೆಕುಂಟೆಯಾಯಿತು. ಸಾಧಾರಣವಾಗಿ ಹಬ್ಬದ, ಗಡಿಬಿಡಿಯ ಬೆಳಗುಗಳಲ್ಲಿ ಮಾಡುವ ಒಗ್ಗರಣೆ ಕಲಸಿದ ತೆಳು ಅವಲಕ್ಕಿಯನ್ನು ತಿಂದು ಮುಗಿಸುವಷ್ಟರಲ್ಲಿ ಹೆಚ್ಚೂ ಕಡಿಮೆ ಉಣಗೋಲು ಹಾರಿಕೊಂಡೇ ಬಂದ ಅಣ್ಣನ ಮಗ ಸಾಕೇತ, “ಅರ್ಜೆಂಟ್ ಮಿಲ್ಲಿಗೆ ಹೋಗ್ಬೇಕು ಬಾ” ಎನ್ನುತ್ತಾ ಇನ್ನೂ ಆರದ, ನನ್ನ ತೊಳೆದ ಕೈಯನ್ನು ಹಿಡಿದುಕೊಂಡು ದರದರನೆ ಎಳೆದುಕೊಂಡೇ ಹೋಗತೊಡಗಿದ. ಜಗುಲಿಯಿಂದಾಚೆ ಕಾಲಿಡುವ ಮುನ್ನ ಹೊರಳಿನೋಡಿದ ನನಗೆ ‘ಏನು ವಿಷಯ?’ ಎಂದು ಕೇಳುತ್ತಿದ್ದ ವೈಷ್ಣವಿಯೂ, ಅವಳನ್ನು ಅವಳ ಪ್ರಶ್ನೆಯ ಸಮೇತ ಕೋಣೆಯೊಳಗೆ ತಳ್ಳಿಕೊಂಡು ಹೋಗುತ್ತಿದ್ದ ಸೋದರ ಮಾವ ಭಾಸ್ಕರರೂ ಕಣ್ಣಿಗೆ ಬಿದ್ದರು. ಈ ಧಾವಂತಗಳೇ ಸಾಕಿತ್ತು, ವೈಷ್ಣವಿಯನ್ನು ನೋಡಲಿಕ್ಕೆ ಗಂಡಿನ ಕಡೆಯವರು ಬರಲಿದ್ದಾರೆಂದು ಅರ್ಥವಾಗುವುದಕ್ಕೆ. ಯಾರಿರಬಹುದು ಆ ಪುಣ್ಯಾತ್ಮ? ಕೇಕೋಡರ ಮಗನಾ? ಶಾಸ್ತ್ರಿಗಳ ಸುಪುತ್ರನಾ? ಅಥವಾ ಇನ್ಯಾವುದೋ ಸಂಸ್ಥಾನದ ಯುವರಾಜನಾ? ಇವರ ಗಡಿಬಿಡಿ ಕಂಡರೆ ಯಾವುದೋ ದೊಡ್ಡ ಮನೆತನದ ಯುವರಾಜನೇ ಇರಬೇಕು. ಪಾಪ ವೈಶು ಟೂರು, ಟ್ರಿಪ್ಪು ಎಂದೆಲ್ಲಾ ಕುಣಿದಾಡಿಕೊಂಡು ಬಂದಳು. ಇಲ್ಲಿವರೆಲ್ಲಾ ಸೇರಿ ಇಷ್ಟು ದೊಡ್ಡ ರೈಲು ಹತ್ತಿಸಲಿದ್ದಾರೆಂಬುದು ಹುಡುಗಿಗೆ ಗೊತ್ತಾಗುವುದಾದರೂ ಹೇಗೆ ಎಂದುಕೊಂಡೆ. ದಾರಿಯಿಡೀ ಕಾಡಿದರೂ ಸಾಕೇತ ಬರಲಿರುವ ಗಂಡಿನ ಜುಟ್ಟು, ಜನಿವಾರಗಳ ಬಗ್ಗೆ ಚಿಕ್ಕ ವಿವರವನ್ನೂ ಬಾಯ್ಬಿಡಲಿಲ್ಲ. ಗದರಿಸಿ ಕೇಳಿದಾಗ ‘ಇಂದಾವರದ ಗಂಡು’ ಎಂದಷ್ಟೇ ಹೇಳಿ ತಾನು ಗುನುಗುತ್ತಿದ್ದ ಹಾಡಿನೊಳಗೆ ತೂರಿಕೊಂಡ. ಮನೆ ತಲುಪುವಷ್ಟೂ ಹೊತ್ತು ನಾನು ಇಂದಾವರದಲ್ಲಿರುವ ಎಲ್ಲಾ ಮದುವೆ ವಯಸ್ಸಿಗೆ ಬಂದಿರುವ ಯುವರಾಜರನ್ನೂ, ಅವರ ಸರಾಸರಿ ವರಮಾನವನ್ನೂ ಲೆಕ್ಕ